ಬೆಂಗಳೂರು ವಿಶ್ವವಿದ್ಯಾಲಯ

ಜ್ಞಾನಭಾರತಿ, ಬೆಂಗಳೂರು – 560 056.

ಸಂಖ್ಯೆ: ಎಸಿಎ–2/ಪಿ.ಜಿ/ಕ್ರಿಮಿನಾಲಜಿ/2020–21 ದಿನಾಂಕ: 10/08/2020

# ಅಧಿಸೂಚನೆ

**ವಿಷಯ:** Choice Based Credit System ಅಡಿಯಲ್ಲಿ 2019–20ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬರುವಂತೆ ಕಲಾ ನಿಖಾಯಕ್ಕೆ ಸಂಬಂಧಿಸಿದ **ಎರಡು ವರ್ಷದ ಎಂ.ಎ. ಕ್ರಿಮಿನಾಲಜಿ (ಒಂದರಿಂದ ನಾಲ್ಕು ಸೆಮಿಸ್ಟರ್)** ಸ್ನಾತಕೋತ್ತರ ಪದವಿಗೆ ಕುಲಾಧಿಪತಿಗಳು ಅನುಮೋದಿಸಿದ್ದು ಈ ಕೋರ್ಸನ್ನು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸುವ ಬಗ್ಗೆ.

**ಉಲ್ಲೇಖ:** 1. ಕರ್ನಾಟಕ ಸರ್ಕಾರದ ಪತ್ರದ ಸಂಖ್ಯೆ: ಇಡಿ 209 ಯುಬಿವಿ 2019 ದಿನಾಂಕ:10/06/2020.
2. ಕುಲಪತಿಯವರ ಅನುಮೋದನೆ ದಿನಾಂಕ: 04/08/2020.

*****

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000ರ ಸೆಕ್ಷನ್ 44(3)ರ ಅಡಿಯಲ್ಲಿ ದಿನಾಂಕ:27/05/2019ರಂದು ನಡೆದ ವಿದ್ಯಾವಿಷಯಕ ಪರಿಷತ್ತಿನ ವಿಶೇಷ ಸಭೆಯಲ್ಲಿ ಕೈಗೊಂಡ ನಿರ್ಣಯದನ್ವಯ ಕಲಾ ನಿಖಾಯಕ್ಕೆ ಸಂಬಂಧಿಸಿದ **ಎರಡು ವರ್ಷದ ಸ್ನಾತಕೋತ್ತರ** ಪದವಿ – ಎಂ.ಎ. ಕ್ರಿಮಿನಾಲಜಿ (ಒಂದರಿಂದ ನಾಲ್ಕು ಸೆಮಿಸ್ಟರ್) **ಕೋರ್ಸನ್ನು 2019–20ನೇ ಶೈಕ್ಷಣಿಕ** ಸಾಲಿನಿಂದ **ಹೊಸದಾಗಿ** ಬೆಂಗಳೂರು ವಿಶ್ವವಿದ್ಯಾಲಯದಲ್ಲಿ **ಪ್ರಾರಂಭಿಸಲು ರೂಪಿಸಿರುವ** ನಿಯಮಾವಳಿಗಳನ್ನು ಮತ್ತು ಪರೀಕ್ಷಾ ರಚನಾ ಕ್ರಮಗಳನ್ನು ಮಾನ್ಯ ರಾಜ್ಯಪಾಲರು ಹಾಗೂ ಕುಲಾಧಿಪತಿಗಳು ದಿನಾಂಕ:30/05/2020ರಂದು ಮಾನ್ಯತೆ/ಅನುಮೋದನೆಯನ್ನು ನೀಡಿರುತ್ತಾರೆ. **(Starting of two years M.A. Post-graduation Course in Criminology (I to IV Semesters) under Choice Based Credit System (CBCS)**.

ಈ ಮೇಲ್ಕಂಡ ಎರಡು **ವರ್ಷದ ಸ್ನಾತಕೋತ್ತರ** ಪದವಿ – ಎಂ.ಎ. ಕ್ರಿಮಿನಾಲಜಿ **(ಒಂದರಿಂದ ನಾಲ್ಕು ಸೆಮಿಸ್ಟರ್) ಪದವಿಯ ಕೋರ್ಸನ್ನು 2019–20ನೇ ಶೈಕ್ಷಣಿಕ** ಸಾಲಿನಿಂದ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ **ಸ್ಥಾಪಿಸಲಾಗಿದೆ ಎಂದು** ಬೆಂಗಳೂರು ವಿಶ್ವವಿದ್ಯಾಲಯವು ಅಧಿಕೃತವಾಗಿ, ಈ ಮೂಲಕ ಪ್ರಕಟಿಸಿದೆ.

ಆದೇಶದ ಮೇರೆಗೆ,

ಕುಲಸಚಿವರು 10/8/2020

ಗೆ.

1. ಕಲಾ ನಿಖಾಯದ ಡೀನರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
2. ಅಧ್ಯಕ್ಷರು, ರಾಜಕೀಯ ಶಾಸ್ತ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

**ಪ್ರತಿಗಳು:**

1. ಕುಲಸಚಿವರು (ಮೌಲ್ಯಮಾಪನ), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
2. ಸಹಾಯಕ ಕುಲಸಚಿವರು/ಅಧೀಕ್ಷಕರು, ವಿದ್ಯಾಶಾಖೆ–1, 2, ಮತ್ತು 4, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
3. ವ್ಯವಸ್ಥೆಯ ವಿಶ್ಲೇಷಕ(System Analyst) ಬೆಂಗಳೂರು ವಿಶ್ವವಿದ್ಯಾಲಯ – ಸಂಬಂಧಪಟ್ಟ ಪಠ್ಯಕ್ರಮಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲುಕೋರಿದೆ.
4. ಕುಲಪತಿಗಳ/ಕುಲಸಚಿವರ ಆಪ್ತಕಾರ್ಯದರ್ಶಿಗಳಿಗೆ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.